ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಪೊಲೀಸ್ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ | ದಿನಾಂಕ : DATE : 18/05/2019

# ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ

**ಬೆಂಗಳೂರು:** ಸುಪ್ರೀಂಕೋರ್ಟ್ ಆದೇಶದಂತೆ 30 ದಿನಗಳ ಒಳಗಾಗಿ ಪೊಲೀಸ್ ಅಧಿಕಾರಿ, ಸಿಬ್ಬಂದಿ ಜ್ಯೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡುವಂತೆ ಡಿಜಿಪಿ ನೀಲಮಣಿ ಎನ್. ರಾಜು ಆದೇಶಿಸಿದ್ದಾರೆ. ಕಮಿಷನರೇಟ್ ಮತ್ತು ವಲಯ ವಾರು ಪ್ರತ್ಯೇಕ ಘಟಕ ರಚನೆ ಮಾಡಿದ ಇನ್‌ಸ್ಪೆಕ್ಟರ್, ಪಿಎಸ್‌ಐ, ಎಎಸ್‌ಐ, ಮುಖ್ಯಪೇದೆ, ಪೇದೆ, ಸಿಎಆರ್, ಡಿಎಆರ್, ಬೆರಳಚ್ಚುಗಾರರು ಸೇರಿ ಎಲ್ಲ ಅಧಿಕಾರಿ, ಸಿಬ್ಬಂದಿಯ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಬೇಕು. ಪ್ರತಿ ಸೋಮವಾರ ಬೆಳಗ್ಗೆ 10 ಗಂಟೆಗೆ ಈ ಬಗ್ಗೆ ಕಚೇರಿಗೆ ತಪ್ಪದೆ ವರದಿ ಒಪ್ಪಿಸುವಂತೆ ನೀಲಮಣಿ ಎನ್.ರಾಜು ಸೂಚಿಸಿದ್ದಾರೆ. ಮೇ 10ರಂದು ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಈಗಾಗಲೇ ಎಎಸ್‌ಐಗಳಿಗೆ ಮುಖ್ಯಪೇದೆಯಾಗಿ ಹಿಂಬಡ್ತಿ ನೀಡಲಾಗಿತ್ತು. ಇದೀಗ ಕೋರ್ಟ್ ಆದೇಶದ ಮೇಲೆ 46 ಎಎಸ್‌ಐಗೆ ಬಡ್ತಿ ನೀಡಿ ಕೌನ್ಸೆಲಿಂಗ್ ನಡೆಸಿ ನಿಯುಕ್ತಿ ಮಾಡಲು ಇಲಾಖೆ ಆದೇಶಿಸಿದೆ.

» **ಪೊಲೀಸ್ ಇಲಾಖೆಗೆ ಸೂಚನೆ**